
# ನರುಗಂಪಿನ ಶಿಶು ಗೀತೆಗಳು




ಲೇಖಕಿ, ವಿಮರ್ಶಕಿ ಎಲ್.ಜಿ . ಮೀರಾ, ಸಂಗೀತ– ನೃತ್ಯಗಳಲ್ಲೂ ಪಳಗಿದವರು. 'ಚಿತ್ರನಾಟ್ಯ ಫೌಂಡೇಶನ್' ಹೊರತಂದಿರುವ ಶಿಶು ಗೀತೆಗಳ ಸಿ.ಡಿ. 'ಕೆಂಪು ಬಲೂನು' ಅವರ ಬಹುಶ್ರುತ ಪ್ರತಿಭೆಗೆ, ಸದಭಿರುಚಿಗೆ ಹಿಡಿದ ಕನ್ನಡಿ. ಬಿ.ಕೆ. ಸುಮಿತ್ರ ತಮ್ಮ ಮಕ್ಕಳೊಂದಿಗೆ ಹಾಡಿ ಸಿದ್ಧಪಡಿಸಿದ 'ರೊಟ್ಟಿ ಅಂಗಡಿ ಕಿಟ್ಟಪ್ಪ'ನ ಹಾಡುಗಳಾದ ಮೇಲೆ ಅದೆಷ್ಟೋ ಸಮಯದ ನಂತರ ಕನ್ನಡ ಮಕ್ಕಳಿಗೆ ಇನ್ನೊಂದು ಗುನುಗಬಲ್ಲ ಗೇಯದ, ಹಿತವಾದ ಸಂಗೀತ ಸಂಯೋಜನೆಯ, ಸುಂದರ ಗೀತ ರಚನೆಯ ಅಪ್ಪಟ ಕನ್ನಡ ಹಾಡುಗಳು ದೊರೆತಂತಾಗಿದೆ. ಕೀ ಬೋರ್ಡ್‌ನಲ್ಲಿ ಉಮಾಕಾಂತ ಪುರಾಣಿಕ, ಗಿಟಾರ್‌ನಲ್ಲಿ ಪ್ರಶಾಂತ ನಾಯಕ, ತಬಲಾದಲ್ಲಿ ಸುರೇಶ ಹೆಗಡೆ ಇಂತಹದೊಂದು ಚಂದದ ಪ್ರಯತ್ನವನ್ನು ಇನ್ನಷ್ಟು ಚಂದವಾಗಿಸಿದ್ದಾರೆ.

ಆರಂಭದ ಗೀತೆ 'ಗಣಪನೆ ಗಣಪನೇ'ಹಾಗೂ ಅಂತ್ಯದ 'ಕನ್ನಡ ಜೋಗುಳ' ತುಸು ಗಂಭೀರವೆನಿಸಿದರೂ ಇನ್ನುಳಿದ 'ಕೆಂಪು ಬಲೂನು, ಆಸೆ, ಮಳೆ ಹಾಡು, ಆಕಾಶಕ್ಕೆ ಏಣಿ'ಗಳೆಲ್ಲಾ ಮೀರಾರಲ್ಲಿರುವ ಮಗುತನಕ್ಕೆ ಸಾಕ್ಷಿ. 'ಫಳ ಫಳ ಕಣ್ಣು' ಹಾಡಂತೂ ದೇಶದ, ಪ್ರತಿ ಮನೆಯ ಹೆಣ್ಣು ಮಗುವಿನ ಕುರಿತೂ ಹಾಡಬೇಕಾದಂತಹ ಭಾವನಿರ್ಭರ ಮುದ್ದು ಗೀತೆ. ಅದರ ಮೃದುಲ ರಚನೆ, ನಮ್ಮ ಸುತ್ತ ನಡೆಯುತ್ತಿರುವ ಹೆಣ್ಣು ಭ್ರೂಣ ಹತ್ಯೆಯಂತಹ ಘೋರಗಳೆಡೆ ಕೇಳುಗರನ್ನು ಸಂವೇದನಾಶೀಲರಾಗಿಸಿದರೆ ಅಚ್ಚರಿಯಿಲ್ಲ. ಸ್ವಂತ ರಚನೆಗಳನ್ನು ಸುಶ್ರಾವ್ಯವಾಗಿ, ಭಾವಪೂರ್ಣವಾಗಿ ಹಾಡಿರುವ ಮೀರಾ, ಒಂದೆರಡು ಮಕ್ಕಳ ಧ್ವನಿಗಳನ್ನು, ಕೋರಸ್‌ಅನ್ನು ಬಳಸಿಕೊಳ್ಳಬಹುದಿತ್ತೇನೋ. ಮುಂದಿನ ಸಿ.ಡಿಯಲ್ಲಿ ಅವರು ಇಂತಹದೊಂದು ಪ್ರಯೋಗಕ್ಕೆ ಮುಂದಾಗಲಿ. ಅಲ್ಲಿಯತನಕ ಬೆಂಗಳೂರಿನ ಅಶ್ವಿನಿ ಆಡಿಯೋ ಮಾರ್ಕೆಟ್ ಮಾಡುತ್ತಿರುವ, ಕೇವಲ 40 ರೂಪಾಯಿ ಬೆಲೆಯ ಈ ಸಿ.ಡಿಯನ್ನು ಕನ್ನಡ ಅಪ್ಪ–ಅಮ್ಮಂದಿರೆಲ್ಲ ಅವರ ಕಂದಮ್ಮಗಳಿಗೆ ಕೊಂಡುಕೊಡಲಿ. ಆ ಮೂಲಕ ಭೀಕರ 'ರಾ ರಾ', 'ಹೇ ಪಾರೋ' ಹಾಡುಗಳಿಗೆಲ್ಲ ಮಕ್ಕಳ ಬಾಯಿಂದ ಬಿಡುಗಡೆ ಸಿಗಲಿ ಅಂತ ಆಶಿಸೋಣ.



–ಸಂಘಮಿತ್ರ